ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 2, May-June 2023, Pp. 61-67
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಬಸವಣ್ಣನವರ ವಚನಗಳಲ್ಲಿ ತಾತ್ವಿಕ ಅನನ್ಯತೆ

**ಡಾ. ಅರುಣಕುಮಾರಿ ಬಿ. ಎನ್**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು (ಸ್ವಾಯತ್ತ), ಗುಬ್ಬಿ

***Abstract:***

*ಹನ್ನೆರಡನೇ ಶತಮಾನ ಕನ್ನಡ ಸಾಹಿತ್ಯ ಮತ್ತು ಕರ್ನಾಟಕ ಚರಿತ್ರೆಯಲ್ಲಿ ಮಹತ್ವದ ಕಾಲಘಟ್ಟ. ಏಕೆಂದರೆ ವಚನ ಸಾಹಿತ್ಯ ಮತ್ತು ಕ್ರಾಂತಿಕಾರಿ ಕಾರ್ಯಕ್ರಮಗಳ ಮೂಲಕ ಶಿವಶರಣರು ಸಮಸಮಾಜ ನಿರ್ಮಾಣಕ್ಕೆ ನಾಂದಿ ಹಾಡಿದರು. ಹಾಗಾಗಿ ವಚನ ಸಾಹಿತ್ಯವು 800 ವರ್ಷಗಳ ತಾತ್ವಿಕ ಗಟ್ಟಿತನ ಉಳಿಸಿಕೊಂಡಿದೆ. ಹನ್ನೆರಡನೇ ಶತಮಾನದಲ್ಲಿ ಸಾಮಾಜಿಕ ಕ್ರಾಂತಿಯ ಜೊತೆಗೆ ಮಹಿಳಾ ಸ್ವಾತಂತ್ರ್ಯ ಮತ್ತು ದಮನಿತರ ಧ್ವನಿಯಾಗಿ ವಚನ ಸಾಹಿತ್ಯ ತನ್ನ ಅಸ್ತಿತ್ವ ಸ್ಥಾಪಿಸಿಕೊಂಡಿತ್ತು. ಅನುಭವ ಮಂಟಪದ ಮೂಲಕ ಸಾಮಾಜಿಕ ಅಸಮಾನತೆ ಹೋಗಲಾಡಿಸಲು ಭಕ್ತಿ ಭಂಡಾರಿಯಾಗಿದ್ದ ಬಸವಣ್ಣನವರು ಕ್ರಾಂತಿಕಾರಿ ಬಸವಣ್ಣನೆಂಬ ಬಿರುದಾಂಕಿತನಾಗಿ ತಳ ಸಮುದಾಯಗಳ ಏಳ್ಗೆಗೆ ಶ್ರಮಿಸಿದರು. ಆ ಮೂಲಕ ಮೂಲೆ ಗುಂಪಾಗಿದ್ದ ಎಲ್ಲ ಜನರ ಒಗ್ಗೂಡುವಿಕೆಗೆ ಮತ್ತು ಸಮಾಜಕ್ಕೆ ತಾತ್ವಿಕ ನೆಲೆಗಟ್ಟನ್ನು ಕಟ್ಟಿಕೊಡುವಲ್ಲಿ ಶ್ರಮಿಸಿದವರು ಬಸವಣ್ಣ. ಪ್ರಸ್ತುತ ಲೇಖನದಲ್ಲಿ ಬಸವಣ್ಣನವರ ವಚನಗಳಲ್ಲಿ ವ್ಯಕ್ತಗೊಂಡಿರುವ ತಾತ್ವಿಕ ಅನನ್ಯತೆಯನ್ನು ವಚನಗಳ ಮೂಲಕ ಕಟ್ಟಿಕೊಡಲಾಗಿದೆ.*

***Keywords:*** *ಬಸವಣ್ಣ, ಶಿವಶರಣರು, ವಚನ ಸಾಹಿತ್ಯ, ತಾತ್ವಿಕ ಅನನ್ಯತೆ, ಅನುಭವ ಮಂಟಪ, ಸಮಾನತೆ.*

**ಪೀಠಿಕೆ**

ಸಮಸಮಾಜದ ಹರಿಕಾರ ಶಿವಶರಣ ಕ್ರಾಂತಿಕಾರಿ ಬಸವಣ್ಣ. ಮುಕ್ತ ಸಂವಾದ ಮತ್ತು ಚರ್ಚೆ ಬಸವಣ್ಣನವರ ವಚನಗಳ ಸಾರವಾಗಿದೆ. ರಸಪ್ರಜ್ಞೆ ಮತ್ತು ನೀತಿಪ್ರಜ್ಞೆ ಇವರ ವಚನಗಳ ಜೀವಾಳ. ಆದ್ದರಿಂದಲೇ 800 ವರ್ಷಗಳು ಕಳೆದರೂ ವಚನದ ಸಾರ ಸಾಂದ್ರತೆಯಿಂದಲೇ ಕೂಡಿದೆ. ಇಲ್ಲಿ ಉಪದೇಶಕ್ಕಿಂತ ತತ್ವ ಮತ್ತು ಆದರ್ಶಗಳಿಂದ ಕೂಡಿದ ಜೀವನ ವಚನಗಳ ಕೇಂದ್ರಬಿಂದು. ಬಸವಣ್ಣನವರು ತಮ್ಮ ವಚನಗಳ ಮೂಲಕ ಸಾಮಾಜಿಕ ಜಾಗೃತಿಯನ್ನು ಮೂಡಿಸಿದರು. ಮಹಿಳೆಯರಿಗೆ ಅಡುಗೆಮನೆಗೆ ಸೀಮಿತವಾಗಿದ್ದ ಕಾಲದಲ್ಲಿ 'ಅನುಭವ ಮಂಟಪ'ವನ್ನು ಸ್ಥಾಪಿಸಿ ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸುವಲ್ಲಿ ಯಶಸ್ವಿಯಾದರು. ಹೆಣ್ಣಾದವಳಿಗೆ ಮುಕ್ತವಾದ ಮಾತುಕತೆ ಮತ್ತು ಚರ್ಚೆಗೆ ಒಂದು ವೇದಿಕೆ ಸಿಕ್ಕಾಗ ಅವಳಲ್ಲಿನ ವೇದನೆ ಮತ್ತು ತೊಳಲಾಟ ಹೇಗೆ ಸಂವೇದನೆಯ ರೂಪ ಪಡೆಯುತ್ತದೆ ಎಂಬುದಕ್ಕೆ ಹಲವು ವಚನಕಾರ್ತಿಯರ ವಚನಗಳೇ ಉದಾಹರಣೆಗಳಂತಿವೆ. ಇದೆಲ್ಲದಕ್ಕೂ ಮೂಲಭೂತ ಪ್ರೇರಣೆಯನ್ನು ಒದಗಿಸಿದವರು ಬಸವಣ್ಣನವರು ಎಂದರೆ ತಪ್ಪಾಗಲಾರದು.

ಸಮಾಜದಲ್ಲಿನ ಅಂಧ ಆಚರಣೆ ಮತ್ತು ಮೂಢನಂಬಿಕೆಗಳನ್ನು ತೊಡೆದು ಹಾಕುವಲ್ಲಿ ಅವಿರತ ಶ್ರಮ ವಹಿಸಿದರು. ಅರ್ಥಹೀನವಾದ ಧಾರ್ಮಿಕ ಆಚರಣೆಗಳು ಶ್ರೇಣಿಕೃತ ಸಮಾಜದಲ್ಲಿ ಮುಗ್ಧ

***Please cite this article as:*** ಅರುಣಕುಮಾರಿ ಬಿ.ಎನ್. (2023). ಬಸವಣ್ಣನವರ ವಚನಗಳಲ್ಲಿ ತಾತ್ವಿಕ ಅನನ್ಯತೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್.* 2(2), 61–67.

ಜನಗಳನ್ನು ಬಲಿ ತೆಗೆದುಕೊಳ್ಳುವ ಕ್ರೂರತೆಯನ್ನು ಖಂಡಿಸಿದರು ಮತ್ತು ಸ್ವತಃ ಸಂಪ್ರದಾಯಬದ್ಧವಾದ ಆಚರಣೆಗಳನ್ನು ಬ್ರಾಹ್ಮಣ ವಿಧಿ ನಿಯಮಗಳನ್ನು ವಿರೋಧಿಸಿ, ಆ ಮೂಲಕ ಸಮಾಜದ ಜನತೆಗೆ ಆದರ್ಶವೆಂದರೆ ವೇದಮಂತ್ರಗಳ ಪಠಣೆ, ಪಾರಾಯಣ ಮಾತ್ರವಲ್ಲ ನಿಷ್ಕಲ್ಮಶವಾದ ಬದುಕು ಎಂದು ತೋರಿಸಿದರು. ಅಂದರೆ ನುಡಿದಂತೆ ನಡೆಯುತ್ತಾ, "ಕಾಯಕವೇ ಕೈಲಾಸ"ವೆಂಬ ಪರಿಕಲ್ಪನೆಯನ್ನು ಸ್ವತಃ ತಾವೇ ರೂಡಿಸಿಕೊಂಡರು. ಆಧ್ಯಾತ್ಮವೆಂದರೆ ಮೂರ್ತಿ ಪೂಜೆಯಲ್ಲ, ದೇವರು ನಿರಾಕಾರ ಮತ್ತು ಅಲೌಕಿಕ ಶಕ್ತಿ. ದೇವನೆಂದರೆ ಸರ್ವಾಂತರ್ಯಾಮಿ, ದೇವನೊಬ್ಬ ನಾಮ ಹಲವು ಆದ್ದರಿಂದ ದೇವರೆಂದರೆ ಒಂದೇ ಕಡೆ ನೆಲೆ ನಿಂತವನಲ್ಲ. 'ದಯವೇ ಧರ್ಮದ ಮೂಲ' ಎಂಬ ವಚನದ ಸಾಲುಗಳು ಇವರ ತತ್ವ ವಿಚಾರಗಳಿಗೆ ಸಾಕ್ಷಿ.

ವಚನ ಸಾಹಿತ್ಯ ಕಾಲಮಾನದಿಂದ ಮಾತ್ರ ವಿಸ್ತಾರವಾಗಿರದೆ, ಸ್ಥೂಲವಾದ ಅರ್ಥ ವಿವರಣೆ ಮತ್ತು ಸಮಾಜಕ್ಕೆ ಪ್ರಸ್ತುತ ವಿಚಾರಗಳ ಅಗತ್ಯತೆಯ ದೃಷ್ಟಿಯಿಂದಲೂ ವಿಪುಲವಾಗಿದೆ. ಅಂದರೆ ವಚನ ಎಂದರೆ ಮಾತು. ಮಾತು ಸರ್ವಕಾಲದಲ್ಲಿಯೂ ಮೌಲ್ಯ ಪಡೆದಿರುತ್ತದೆ ಎಂದರ್ಥ. ಆ ಮೌಲ್ಯವು ವಸ್ತುತಃ ವಿವರಣೆ ಮತ್ತು ಶ್ರೇಷ್ಠತೆ ಎಷ್ಟರ ಮಟ್ಟಿನದು ಎಂಬುದನ್ನು ಮಾತಿನ ಮೌಲ್ಯ ನಿರ್ಧರಿಸುತ್ತದೆ. ಹಾಗಾಗಿ ಮಾತಿರುವವರೆಗೆ ವಚನ ಪ್ರಸ್ತುತವೇ. ಅಂದರೆ ಪ್ರಮಾಣಬದ್ಧ ನಡೆ–ನುಡಿ ವಚನದಲ್ಲಿಯೇ ಅಡಗಿದೆ, ಅದು ಮಾತಾಗಿ ಪರಿವರ್ತನೆ ಹೊಂದಿದೆ. ಈ ಮಾತಿಗೆ ನಿದರ್ಶನವೆಂಬಂತೆ ಬಸವಣ್ಣನವರು ವಚನಗಳ ಮೂಲಕವೇ ಉತ್ತರ ಕೊಡುತ್ತಾರೆ. ಸಾಮರಸ್ಯ ಜೀವನ ಉತ್ತಮ ಸಮಾಜದ ಬಂಧುವಿದ್ದಂತೆ. ಆ ಸಾಮರಸ್ಯಕ್ಕೆ ಮುಕ್ತಮಾತು ಮತ್ತು ಸಹಬಾಳ್ವೆ ಇಂಬು ಕೊಡುತ್ತದೆ. ತನ್ನತನದ ಔನ್ನತ್ಯ ಬಯಸುವವನು ಪರರ ಧ್ಯಾನ ಮಾಡುವುದಿಲ್ಲ. ಬೇರೆಯವರ ಬಗೆಗೆ ಚಿಂತಿಸುವ ಮನಸ್ಸು ಇಲ್ಲವೆಂಬುದನ್ನು ಹೀಗೆ ಹೇಳುತ್ತಾರೆ.

*'ಪರರ ಚಿಂತೆ ನಮಗೇಕಯ್ಯಾ*
*ನಮ್ಮ ಚಿಂತೆ ನಮಗೆ ಸಾಲದೆ?*
*ಕೂಡಲಸಂಗಯ್ಯ ಒಲಿದಾನೋ ಒಲಿಯನೋ*
*ಎಂಬ ಚಿಂತೆ*
*ಹಾಸಲುಂಟು, ಹೊದಿಯಲುಂಟು'.*

ಸದಾ ಪರತೆಯ ಬಗ್ಗೆ ಯಾರು ಧ್ಯಾನಸ್ತ ಸ್ಥಿತಿಯಲ್ಲಿರುತ್ತಾರೋ ಅವರಿಗೆ ವೈಯಕ್ತಿಕ ಸುಖ ಮರೆತ ಸಂಪತ್ತು. ವಿವೇಕಿಯಾದವನು ಮತ್ತೊಬ್ಬರ ತಪ್ಪನ್ನು ದೂಷಿಸುವುದರ ಬದಲು, ತನ್ನ ಶ್ರೇಷ್ಠತೆಯ ಜೊತೆಗೆ ಪರರ ಶ್ರೇಷ್ಠತೆಯನ್ನು ಗುರುತಿಸಿ ಮೆಚ್ಚುವವನೇ ನಿಜವಾದ ಶರಣ ಎನ್ನುತ್ತಾರೆ. ಅಂದರೆ ಇಲ್ಲಿ ಪ್ರತಿಯೊಬ್ಬರೂ ನಿಸ್ವಾರ್ಥ ಮನೋಭಾವ ಬೆಳೆಸಿಕೊಂಡಾಗ ಮಾತ್ರ ಉತ್ತಮ ಸಮಾಜ ನಿರ್ಮಾಣವಾಗುತ್ತದೆಂಬ ಇಂಗಿತ ವ್ಯಕ್ತಪಡಿಸುತ್ತಾರೆ.

ಶಿವ ಭಕ್ತನಾದವನು ಆತ್ಮಸ್ತುತಿ ಮತ್ತು ಆತ್ಮನಿಂದನೆಗೆ ಕಿವಿ ಕೊಡಬಾರದು. ಆತ್ಮಸ್ತುತಿ ಪ್ರತಿ ಸಂದರ್ಭದಲ್ಲಿಯೂ ಮನುಷ್ಯನಿಗೆ ಕೆಡುಕನ್ನುಂಟುಮಾಡುತ್ತದೆ. ಅದು ಪರ ನಿಂದನೆಯಲ್ಲಿಯೇ ಹುಡುಕಾಟ ನಡೆಸುವುದರಿಂದ ತನ್ನತನವನ್ನು ಮನುಷ್ಯ ಕಳೆದುಕೊಳ್ಳುತ್ತಾನೆ. ತನ್ನತನ ರಹಿತನಾದವನು ಹೆಣಕ್ಕೆ ಸಮಾನ ಎಂದು ತಿಳಿಸುತ್ತಾರೆ.

*'ಆತ್ಮಸ್ತುತಿ ಪರ ನಿಂದನೆಯ ಕೇಳಿಸದಿರಯ್ಯ ನಿಮ್ಮ ಧರ್ಮ!*
*ಆನು ಭಕ್ತ ನನ್ನಲ್ಲಿ ಲೇಸುಂಟು ಪರಿಣಾಮಿಸಿದಡೆ*
*ನಿಮಗಾನು ದ್ರೋಹಿಯಯ್ಯ,*
*ಕೂಡಲಸಂಗಮದೇವ*
*ನಿಮ್ಮ ಶರಣರಲೇಸೇ ಎನ್ನಲೇಸಯ್ಯ'*

'ದಯವೇ ಬೇಕು ಸಕಲ ಪ್ರಾಣಿಗಳಲ್ಲಿ' ಎಂಬ ಮಾತಿಗೆ ಮೆಚ್ಚಿ ನಡೆದವರು ಶರಣರು. ಇಂತಹ ಶರಣರು ಪರಮಾತ್ಮನೆಡೆಗೆ ಭಕ್ತಿಗಿಂತ ಭಕ್ತನೊಂದಿಗೆ ಆತ್ಮಾನುಸಂಧಾನಿಯಾಗಿರಬೇಕು. ಇದರ ಹೊರತು ಆತ್ಮಸ್ತುತಿಯಲ್ಲಿ ನಡೆಯುತ್ತಾ, ಪರ ನಿಂದನೆಗೆ

ಇಳಿಯುವುದು ಧರ್ಮಬಾಹಿರ. ವ್ಯಕ್ತಿ ವ್ಯಕ್ತಿಗಳಲ್ಲಿ ಅಭಿಮಾನವಿರಬೇಕೇ ಹೊರತು ಅನುಮಾನಕ್ಕೆ ಅವಕಾಶವಿರಬಾರದು. ಅಂದರೆ ಇಲ್ಲಿ ಸ್ವ–ವಿಮರ್ಶೆಯ ಮೂಲಕ ತನ್ನ ತಪ್ಪನ್ನು ತಾನೇ ಅರ್ಥ ಮಾಡಿಕೊಂಡು ಸಹಬಾಳ್ವೆ ನಡೆಸುವವನು ನಿಜ ಶರಣ ಎಂದು ಪುಷ್ಟಿಕರಿಸುತ್ತಾರೆ. ಆಸೆ ಎಂಬುದು ಮನುಷ್ಯನಿಗೆ ಸಹಜ, ಅಂತೆಯೇ ಆತ್ಮತೃಪ್ತಿ ಎಂಬುದನ್ನು ಆಸೆಯ ಮೂಲಕ ಈಡೇರಿಸಿಕೊಂಡವನೇ ನಿಜವಾದ ಮನುಷ್ಯ. ಆದರೆ ಇಂದು ಆಸೆಯೆಂಬುದು ನಾನಾರ್ಥ ಪಡೆದುಕೊಂಡಿದೆ. ಮನುಷ್ಯ ತನ್ನ ಬದುಕಿನುದ್ದಕ್ಕೂ ಹೆಣಗುವ ಪರಿಯನ್ನು ಹಲವು ನಿದರ್ಶನಗಳನ್ನು ವಚನಗಳಲ್ಲಿ ಕಟ್ಟಿಕೊಡುತ್ತಾರೆ.

***'ಊರ ಸೀರೆಗೆ ಅಗಸ ಬಡಿವಡೆದಂತೆ***
***ಹೊನ್ನೆನದು ಹೆಣ್ಣೆನದು***
***ಮಣ್ಣೆನದು ಎಂದು ಮರುಳಾದೆ.***
***ನಿಮ್ಮನರಿಯದ ಕಾರಣ***
***ಕೆಮ್ಮನೆ ಕೆಟ್ಟ ಕೂಡಲಸಂಗಮದೇವ'.***

ಊರವರ ಮೆತ್ತಿದ ಹೊಲಸನ್ನೆಲ್ಲಾ ತೊಳೆಯುವ ಅಗಸ ತನ್ನದೆನ್ನುವಂತೆ ಮನೆಮನೆಗೂ ಹೋಗಿ ಬಟ್ಟೆಗಳನ್ನು ಸಂಗ್ರಹಿಸಿ ಶುಚಿಗೊಳಿಸುತ್ತಾನೆ. ಆದರೆ ಮಡಿ ಬಟ್ಟೆಯ ಶುಭ್ರತೆಯಂತೆ ಮನುಷ್ಯರಿರಬೇಕಲ್ಲ! ಯಾವುದೋ ನೆಪ ತೆಗೆದು ತಲೆಗೊಂದರಂತೆ ಇಸ್ತ್ರಿ ಶುಭ್ರವಾಗಿಲ್ಲ ಬಟ್ಟೆ ಹರಿದಿದೆ ಎಂಬ ಮಾತುಗಳನ್ನಾಡಿ ನಿಂದಿಸುವಂತೆ ತನ್ನದಲ್ಲದ ಕ್ಷಣಿಕ ಆಳುವುದಕ್ಕೆ ಸೀಮಿತವಾದ ಅನುಭವಿಸುವುದಕ್ಕೆ ಹಣ ಆಸ್ತಿ, ಭೂಮಿಗೆ ಹೋರಾಡಿದ ಹುಲು ಮಾನವನ ಬದುಕನ್ನು ಈ ಮೂರು ಸಾಲಿನ ವಚನ ನೈಜತೆಯನ್ನು ದೃಷ್ಟೀಕರಿಸುತ್ತದೆ. ಇಲ್ಲಿ ನೀತಿಗಿಂತ ನೈಜತೆ ಮನುಷ್ಯನ ಬದುಕನ್ನು ತೆರೆದಿಡುತ್ತದೆ.

ಮನುಷ್ಯನಾದವನು ಆಚಾರವಂತನಾದರೆ ಸಾಲದು, ವಿಚಾರವಂತನಾದಾಗ ಒಳಿತು ಕೆಡುಕುಗಳ ವಿವೇಕದ ಅರಿವು ಮೂಡುತ್ತದೆ. ಇದನ್ನು ವಿದ್ಯೆ ಜೊತೆಗೆ ಸಮಾಜದಲ್ಲಿ ಮುಕ್ತವಾಗಿ ಬೆರೆಯುವ ಮತ್ತು ಸ್ಪಂದಿಸುವ ಗುಣ ರೂಡಿಸಿಕೊಳ್ಳಬೇಕು ಎನ್ನುತ್ತಾರೆ. ಅಂದರೆ ಇಲ್ಲಿ ಸ್ವಾರ್ಥಕ್ಕಿಂತ ಸೇವೆಗೆ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟಿರುವುದು ಮುಖ್ಯವಾಗುತ್ತದೆ.

***'ವಿಷಯವೆಂಬ ಹಸುರನೆನ್ನ ಮುಂದೆ***
***ತಂದು ಪಸರಿಸಿದೆಯಯ್ಯ***
***ಪಶುವೇನ ಬಲ್ಲುದು_ಹಸುರಂದೆಳೆಸುವುದು***
***ವಿಷಯರಹಿತ ಮಾಡಿ***
***ಭಕ್ತಿರಸವ ದಣಿಯೆ ಮೇಯಿಸಿ***
***ಸುಬುದ್ದಿಯೆಂಬ ಉದಕವನೆರೆದು***
***ನೋಡಿ ಸಲಹಯ್ಯ ಕೂಡಲಸಂಗಮದೇವ'***

'ಬೆಳ್ಳಗಿರುವುದೆಲ್ಲಾ ಹಾಲಲ್ಲ' ಎಂಬ ಗಾದೆ ಮಾತಿನಂತೆ ಹಸಿರಾಗಿರುವುದೆಲ್ಲವೂ ಹುಲ್ಲಲ್ಲ ಪಾಚಿಯು ಹಸಿರೇ ಆದರೆ ಆತುರವಾಗಿ ಮೇಯೋ ಹೋದರೆ ಮೈ ತರಚುತ್ತದೆ. ವಿಷಯ ಲಂಪಟನಾದವನು ಆತುರದಿಂದ ಬದುಕ ನಡೆಸಿದರೆ ಅವನಿಗೆ ತೃಪ್ತಿ ಸಿಗದು ಜೀವನದಲ್ಲಿ ಪರಿಪೂರ್ಣತೆಯೂ ಇರದು. ದಂಡಿಯಾಗಿ ಹಿಂಡಿನಲ್ಲಿರುವ ಪಶುವನ್ನೂ ಸರಿದಾರಿಗೆ ತರುವ ದನಗಾಹಿಗೂ ಒಂದು ಜವಾಬ್ದಾರಿ ಇರುತ್ತದೆ. ಅಂತೆಯೇ ಶರಣನಾದವನನ್ನು ಸರಿದಾರಿಗೆ ತರುವುದು, ಇಂತಹ ಶ್ರೇಷ್ಠ ತತ್ವ ವಿಚಾರಗಳನ್ನು ರೂಢಿಸಿಕೊಂಡ ಮತ್ತೊಬ್ಬ ಶರಣ ಮಾತ್ರ. ಇಲ್ಲಿ ಸೂಕ್ಷ್ಮವಾಗಿ ಗಮನಿಸಬೇಕಾದ ವಿಚಾರವೆಂದರೆ ಭಕ್ತನಿಗಿಂತ ತತ್ವಗಳನ್ನು ಅಳವಡಿಸಿಕೊಂಡು ಸ್ಪೂರ್ತಿದಾಯಕ ಬದುಕು ರೂಪಿಸಿಕೊಂಡ ಶಿವಶರಣನೇ ಆದರ್ಶಪ್ರಾಯನಾಗುತ್ತಾನೆ. ಇದಕ್ಕೆ ಉದಾಹರಣೆ ಎಂಬಂತೆ 12ನೇ ಶತಮಾನದ ಎಲ್ಲ ಶರಣರ ಆದರ್ಶ ಕಾಯಕಮಾರ್ಗವೇ ಸಾಕ್ಷಿ, ಪ್ರಾಪಂಚಿಕ ವಿಷಯಾಸಕ್ತಿಯಲ್ಲಿ ತಲ್ಲೀನನಾಗದೆ ಭಕ್ತಿರಸವನ್ನು ಅರಗಿಸಿಕೊಂಡು ಸುಬುದ್ಧಿಯನ್ನು ತಿಳಿಯ ಹೇಳುವುದು ಶರಣನ ಕರ್ತವ್ಯ. ಐಹಿಕ ಜೀವನ ಆಸಕ್ತಿಗಿಂತ, ಸೇವಾಪರ ಭಕ್ತಿಯ ಪಾರಮ್ಯವೇ ಶರಣನಿಗೆ ಮುಕ್ತಿ ಸಂಕೇತ ಎನ್ನಬಹುದು.

ಭಕ್ತಿ ಮತ್ತು ಭಕ್ತ ಒಂದೇ ನಾಣ್ಯದ ಎರಡು ಮುಖಗಳು. ನಾವು ಮಾಡುವ ಕೆಲಸ ಆತ್ಮತೃಪ್ತಿಗೆ ಹೊರತು ಜಾಹೀರಾತಿನಂತೆ ಜಗಜ್ಜಾಹಿರ ಆಗಬಾರದೆನ್ನುತ್ತಾರೆ.

*'ಮಾಡುವಂತಿರಬೇಕು ಮಾಡದಂತಿರಬೇಕು*
*ಮಾಡುವ ಮಾಟದೊಳಗೆ ತಾನಿಲ್ಲದಂತಿರಬೇಕು*
*ಕೂಡಲಸಂಗಮದೇವರ ನೆನವುತ್ತ ನೆನವುತ್ತ*
*ನೆನೆಯದಂತಿರಬೇಕು'*

ಇಲ್ಲಿ ಭಕ್ತ ಮತ್ತು ಭಕ್ತಿ, ಕಾಯಕ ಮತ್ತು ದಾಸೋಹ, ಸತ್ಯ ಮತ್ತು ನಿಷ್ಠೆ, ಹಸಿವು ಮತ್ತು ಅರಿವು ಕಾಣದ ಕಾಯಕದ ಸಂಕೇತ. ನಾನೆಂಬ ಅಹಂಕಾರವಿಲ್ಲದೆ ಮಾಡುವ ಕೆಲಸ ಗೂಢ ಮತ್ತು ಗಂಭೀರವಾದಾಗ ಮಾತ್ರ ಮಾಡಿದ ಸೇವೆ ಸಾರ್ಥಕವಾಗುತ್ತದೆ. ದಾನ ಮತ್ತು ಭಕ್ತಿ ಆದಷ್ಟು ಗೌಪ್ಯವಾಗಿದ್ದರೆ ಸಾಧನೆ ಅತಿ ಸುಲಭ ಮತ್ತು ಶ್ರೇಯಸ್ಕರವೆನ್ನಬಹುದು.

*'ನೀವಿರಿಸಿದ ಮನದಲ್ಲಿ ನಾನಂಜೆನಯ್ಯ*
*ಮನವು ಮಹಾಘನಕ್ಕೆ ಶರಣಾಗತಿವೊಕ್ಕುದಾಗಿ*
*ನೀವಿರಿಸಿದ ಧನದಲ್ಲಿ ನಾನಂಜೆನಯ್ಯ*
*ಧನವು ಸತಿ ಸುತ ಮಹಾಪಿತರಿಗೆ ಹೋಗದಾಗಿ*
*ನೀವಿರಿಸಿದ ತನುವಿನಲ್ಲಿ ನಾನಂಜೆನಯ್ಯ*
*ತನುವು ಸರ್ವಾರ್ಪಿತದಲ್ಲಿ ನಿಯತ ಪ್ರಸಾದ*
*ಭೋಗಿಯಾಗಿ*
*ಇದು ಕಾರಣ ವಿರಧೀರ ಸಮುಗ್ರಾಹಕನಾಗಿ*
*ನಿಮಗಾನಂಜೆ ಕೂಡಲಸಂಗಮದೇವ'*

ಜೀವ ಕ್ಷಣಿಕ ಪ್ರತಿಯೊಬ್ಬ ಮನುಷ್ಯನು ಭೂಮಿಯ ಮೇಲೆ ಜೀವ ತಳೆದಿದ್ದಾನೆ ಎಂದರೆ ಯಾವುದಾದರೂ ಸಾರ್ಥಕ ರೀತಿಯಲ್ಲಿ ಬದುಕು ನಡೆಸಬೇಕೆಂದು ಹಂಬಲಿಸುತ್ತಾನೆ. ಈ ಹಂಬಲ ಕೇವಲ ಮಾತುಗಳಿಗೆ ಸೀಮಿತವಾಗಬಾರದು. ಸರ್ವಂ ಶಿವಮಯಂ ಸರ್ವಾಂತರ್ಯಾಮಿಯಾದ ಶಿವನು ಸಹ ಕಾಯಕ ನಿರತನೇ. ಆದ್ದರಿಂದ ತನು ಮನ ಧನ ಸಮರ್ಪಿತವಾಗಬೇಕೆಂದರೆ ಶರಣನಾದವನು ಕಾಯಕಯೋಗಿ ಆಗಬೇಕೆಂಬುದು ಈ ವಚನದ ತಾತ್ವಿಕತೆ. ತನುವಿನ ಮೇಲಿನ ಅತಿಯಾಸೆ ಮನದ ಮೇಲಿನ ಮೋಹ ವಿಷಯ ಲಾಲಸೆ ದನದ ಮೇಲೆ ಅಧಿಕಾರ ಇವೆಲ್ಲವನ್ನು ಮನುಷ್ಯ ತ್ಯಜಿಸಿದಾಗ ಅವನಿಗೆ ಶಿವಸಾಕ್ಷಾತ್ಕಾರವಾಗುತ್ತದೆ. ಇವೆಲ್ಲವನ್ನೂ ಸಮ ಪ್ರಮಾಣದಲ್ಲಿ ಯಾರು ರೂಢಿಸಿಕೊಂಡು ಬದುಕು ನಡೆಸುತ್ತಾನೋ ಅವನೇ ನಿಜವಾದ ಅನುಭಾವಿ ಎನ್ನಬಹುದು.

*'ಮನ ಮನ ಬೆರೆಸಿದಲ್ಲಿ ತನು ಕರಗದಿದ್ದಡೆ*
*ಸೋಂಕಿನಲ್ಲಿ ಪುಳಕಂಗಳು ಹೊರಹೊಮ್ಮದಿದ್ದಡೆ*
*ಕಂಡಾಗಳಶ್ರು ಜಲಂಗಳು ಸುರಿಯದಿದ್ದಡೆ*
*ನುಡಿಯಲ್ಲಿ ಗದ್ಗದಂಗಳು ಪೊಣ್ಮದಿದ್ದಡೆ*
*ಕೂಡಲ ಸಂಗಮ ದೇವರ ಭಕ್ತಿಗಿದು ಚಿಹ್ನವೆ?*
*ಎನ್ನಲ್ಲಿ ಇಲ್ಲಾಗಿ–ಆನು ಡಂಬಕ ಕಾಣಿರೇ!'*

ಡಾಂಬಿಕ ಭಕ್ತನ ನಡವಳಿಕೆ ಕೇವಲ ತೋರಿಕೆಗೆ ಮಾತ್ರ. ವಿನಮ್ರ ಮತ್ತು ವಿಧೇಯತೆ ಫಲಾಪೇಕ್ಷ ಉಳ್ಳವನಲ್ಲಿ ಮಾತ್ರ ಅವನೇ ಡಾಂಬಿಕ. ಇಂತಹವನು ತನಗೆ ತಾನೇ ಏಕಾಂಗಿ ಆಗುತ್ತಾನೆ ಒಂಟಿಯಾಗುತ್ತಾನೆ. ಮನಸ್ಸಿನ ಕಳ್ಳನಾಗಿ ಪರಿವರ್ತಿತನಾಗುತ್ತಾನೆ. ಪ್ರತಿ ಸಂದರ್ಭದಲ್ಲಿ ಅಹಂಕಾರ ಕ್ರೌರ್ಯವಂಚಿತ ಮನಸ್ಕನಾಗುತ್ತಾನೆ. ಆದರೆ ನಿಜಭಕ್ತನಾದವನು ಅಹಂಕಾರ ರಹಿತನಾಗಿ ಸದಾ ಹಸನ್ಮುಖಿಯಾಗಿರುತ್ತಾನೆ. ತಾನು ಭಾವಿಸಿದ ಕ್ಷಣ ಮನ ಮಗ್ನನಾಗಿರುತ್ತಾನೆ. ಮುಟ್ಟಿದರೆ ರೋಮಾಂಚಕನಾಗುವ ವ್ಯಕ್ತಿತ್ವದವನು ಭಕ್ತ. ಸಾತ್ವಿಕ ವ್ಯಕ್ತಿಯಾದವನು ಶರಣ. ಸಾತ್ವಿಕತೆಯಲ್ಲಿ ದೃಢತೆ ಮತ್ತು ಘನತೆಗಳು ಅಳವಡಿಕೆ ಆಗಿರುತ್ತವೆ. ಶಿವಭಕ್ತಿಯಲ್ಲಿ ತಲ್ಲೀನನಾದವನು ಮಾತನಾಡಿಸಿದರೆ ಗದ್ಗದಿತವಾಗುವ ಭಕ್ತಿಯ ಪರಾಕಾಷ್ಠೆಯಲ್ಲಿ ಮುಳುಗಿದವನಿಗೆ ಮುಟ್ಟಿದರೆ ರೋಮಾಂಚನಗೊಳ್ಳುವ ಮೆಲುಮಾತು ಹೊಳಪಿನದೃಷ್ಟಿ ಯಾರಲ್ಲಿ ಇರುತ್ತದೋ ಇದು ಭಕ್ತಿಯಿಂದ ತುಂಬಿದ ಭಕ್ತನಾದವನ ಚಿಹ್ನೆ . ಇದು ಕೂಡಲಸಂಗಮದೇವನಿಗೆ ಇಷ್ಟವಾಗುವಂತದ್ದು ಎನ್ನುತ್ತಾರೆ

ಆತ್ಮವಿಮರ್ಶೆ ಇಲ್ಲದ ವ್ಯಕ್ತಿಯ ಸಾಧನೆ ಶ್ರೇಷ್ಠ ತರವಲ್ಲ. ಪ್ರತಿಯೊಬ್ಬರು ಸ್ವಯಂ ವಿಮರ್ಶೆ ಮಾಡದ ಹೊರತು ಅವನು ಯಾವ ಸಾಧನೆಯಲ್ಲಿಯೂ ಶ್ರೇಷ್ಠನೆನಿಸಿಕೊಳ್ಳಲಾರ.

*'ಎನಗೆ ನಾನೇ ಹಗೆ ನೋಡಯ್ಯ*
*ಎನಗೆ ನಾನೇ ಕೆಳೆ ನೋಡಯ್ಯ*
*ನಿಮ್ಮ ಸದ್ಭಕ್ತರೊಡನೆ*
*ವಿರೋಧ ಮಾಡದೆ ಎನ್ನ ಕೊಲುವುದಾಗಿ*
*ನಿಮ್ಮ ಪುರಾತನರಿಗಂಜಿ*
*ಬೆಸಗೊಂಡಡೆ ಎನ್ನ ಕಾಯ್ವುದಾಗಿ*
*ಅನ್ಯ ಹಗೆ ಎಲ್ಲಿ ಕೆಳೆ ಎಲ್ಲಿ?*
*ಬಾಗಿದ ತಲೆಯ*
*ಮುಗಿದ ಕೈಯಾಗಿರಿಸು-ಕೂಡಲಸಂಗಮದೇವ'*

ಆತ್ಮನಾಶಕ್ಕಿಂತಲೂ ಮನುಷ್ಯನಿಗೆ ವಿನಾಶವೊಂದಿಲ್ಲ. ತತ್ವಾಚಾರ ಹಿತನಾಗಿ ಸದಾ ಹಿರಿಯರ ಸೇವೆಯನ್ನರಿತು ಅಂತರಂಗ ಶುದ್ದಿಯನ್ನು ಮಾಡಿಕೊಂಡಾತ ತನಗೆ ತಾನೇ ಗೆಳೆಯ. ರಾಗ ದ್ವೇಷಗಳು ಅವನ ಹತ್ತಿರವು ಸುಳಿಯುವುದಿಲ್ಲ, ವ್ಯಕ್ತಿ ಹಾಳಾಗಲು ಬೇರೆ ವ್ಯಕ್ತಿ ಬೇಡ ಸ್ವಯಂ ವ್ಯಕ್ತಿತ್ವವೇ ಸಾಕು. ತಾನು ಮಾಡುವ ಕಾಯಕದ ಮೂಲಕ ಅಮೃತತ್ವವನ್ನು ಪಡೆಯಬೇಕಾದರೆ ಸಜ್ಜನರಲ್ಲಿ ವಿನಯವಂತಿಕೆಯನ್ನು ಅಹಂಕಾರವಂತರಲ್ಲಿ ಮೃದುತ್ವ ವನ್ನು ಕಾಣುವಂತಿರಬೇಕು. ಅಹಂಕಾರಿಯಾದವನ ಮುಂದೆ ದುರ್ವರ್ತಿಸಿದರೆ ನಮಗೂ ಅವರಿಗೂ ವ್ಯತ್ಯಾಸವಿರುವುದಿಲ್ಲ, ಇದು ಸ್ವಯಂ ಕೇಡಿನ ಸಂಕೇತವೆನ್ನುತ್ತಾರೆ. ಹಿಟ್ಟಿನ ಗಿರಣಿ ಎಷ್ಟೇ ಗಟ್ಟಿಯಾದರು ಅದರಿಂದ ಬರುವ ಹಿಟ್ಟು ಮೃದುವಾಗಿರುತ್ತದೆ. ಅಂತೆಯೇ ಮನಸ್ಸು ಎಷ್ಟೇ ಮರ್ಕಟವಾದರೂ ಭಕ್ತಿ ರೂಢಿಸಿಕೊಂಡ ಶರಣ ಹಿಟ್ಟಿನ ನಾದದಿಂದ ಹೊರತೆಗೆದ ಪರಿಕರವಾಗಿ ಪಸರಿಸುತ್ತಾನೆ. ಅಂದರೆ ಬಸವಣ್ಣನವರ ಅನೇಕ ವಚನಗಳು ತತ್ವ ಮತ್ತು ನೈಜ ಜೀವನದ ಪ್ರತೀಕಗಳಾಗಿವೆ.

ಕಾಯ ಮತ್ತು ಕಾಯಕದ ಹದ ಹೇಗಿರಬೇಕೆಂದರೆ ಮೆದುವಾದರೂ ಶ್ರೇಷ್ಠತೆಯಿಂದ ಕೂಡಿರಬೇಕೆನ್ನುತ್ತಾರೆ. ಭಕ್ತನ ಭಕ್ತಿ ಅನನ್ಯತೆಯಿಂದ ಕೂಡಿದ್ದರೆ ಪ್ರತಿ ಸಂದರ್ಭವು ಮೆಲುವಂತಿಕೆ ಮತ್ತು ಫಲವಂತಿಕೆಗೆ ಇಂಬು ಕೊಡುತ್ತದೆ ಎನ್ನುತ್ತಾರೆ.

*'ಮಾಡುವ ಭಕ್ತನ ಕಾಯ ಬಾಳೆಯ*
*ಕಂಬದಂತಿರಬೇಕು*
*ಮೆಲ್ಲ ಮೆಲ್ಲನೆ ಹೊರೆಯೆತ್ತಿ ನೋಡಿದಡೆ*
*ಒಳಗೆ ಕೆಟ್ಟಿಲ್ಲದಿರಬೇಕು*
*ಮೇಲಾದ ಫಲವ*
*ನಮ್ಮವರು ಬೀಜ ಸಹಿತ ನುಂಗಿದರು*
*ಎನಗಿನ್ನಾವ ಭಯವಿಲ್ಲ*
*ಕಾಣಾ ಕೂಡಲಸಂಗಮದೇವ'.*

ತಾನು ಮಾಡಿದ ಕೆಲಸವನ್ನು ಸಮರ್ಥಿಸಿ ಕೊಳ್ಳುವುದು ಮನುಷ್ಯ ಸಹಜ ಗುಣ. ಇದು ಸ್ವ-ಸಾಮರ್ಥ್ಯವೋ ಅಹಂಕಾರವೋ ಯಾವುದಾದರೂ ದೋಷವೇ!. ಎಲ್ಲವನ್ನು ಸಮನಾಗಿ ಸರಿದೂಗಿಸಿ ಸಂಭಾಳಿಸಿಕೊಂಡು ಹೋಗುವವನೇ ನಿಜವಾದ ಶರಣ. ಸಜ್ಜನನಾದವನು ಇನ್ನೊಬ್ಬನ ಏಳ್ಗೆಯನ್ನು ಸಹಿಸುವಂತಿರಬೇಕು. ಆಗ ಮಾತ್ರ ಅವನನ್ನು ಸಭ್ಯನೆಂದು ಸಂಬೋಧಿಸಬಹುದು ಇದನ್ನೇ ಬಸವಣ್ಣನವರು ಬಾಳೆಯ ದಿಂಡಿಗೆ ಹೋಲಿಸಿ ಭಕ್ತನಾದವನ ದೇಹ ಮತ್ತು ಕಾಯಕದ ಮಹತ್ವತೆ ತಿಳಿಸುತ್ತಾರೆ. ಅಂದರೆ ಬಾಳೆಯ ದಿಂಡಿನಲ್ಲಿ ಸರಳತೆ ಮೈ ಹಾಸಿರುತ್ತದೆ ದಿಂಡನ್ನು ಪೊರೆಪೊರೆಯಾಗಿ ಸುಳಿದರು ಅದರಲ್ಲೂ ಕೆಚ್ಚಾಗಲಿ ಗಡಸುತನವಾಗಲಿ ಇರುವುದಿಲ್ಲ ಇದನ್ನೇ ಸಾತ್ವಿಕ ವ್ರತದಾರಿಗಳು ಮೃದುತ್ವದ ಸಂಕೇತವೆಂದು ಆಹಾರವಾಗಿ ಬಳಸುತ್ತಾರೆ. ಬಾಳೆಹಣ್ಣಿನಲ್ಲಿರುವ ಕರಿ ಬೀಜಗಳು ಸಹ ಬೇರ್ಪಡುವಂಥದ್ದಲ್ಲ ಅಂದರೆ ಬಾಳೆಯ ಗಿಡದ ಹಣ್ಣಿನ ಮೃದುತ್ವ ನಿರಹಂಕಾರದ ಸಂಕೇತ ಶರಣನಾದವನ ಭಕ್ತಿ ನಿರಹಂಕಾರ ಮತ್ತು ಬಾಳೆಯ ಹಣ್ಣಿನಲ್ಲಿ ಅಡಗಿ ಕುಳಿತ ನಿರ್ಬೀಜದಂತಿರಬೇಕು. ಆಗ ಮಾತ್ರ ಸಾತ್ವಿಕ ಫಲದ ರುಚಿ ಸೃಜಿಸುತ್ತದೆ. ಶರಣ

ಪರಂಪರೆಯು ಇಂತಹ ನಿರ್ಬೀಜವನ್ನು ನುಂಗುವ ಪರಿ ಮುಂಬರುವ ಶರಣರಿಗೆ ತತ್ವಾದರ್ಶ ಎನ್ನಬಹುದು. ನಡೆ ನುಡಿ ಒಂದಾದೊಡೆ ದೃಢಭಕ್ತಿ ಎಂಬಂತೆ ನಡೆ ನುಡಿ ಅರಿಯದೆ ತೋರ್ಪಡಿಕೆಯ ಭಕ್ತನಾದಡೇ ಅವನು ಶಿವಶರಣನಾಗಲು ಸಾಧ್ಯವಿಲ್ಲ.

*'ನಡೆಯಲರಿಯದೆ ನುಡಿಯಲರಿಯದೆ*
*ಲಿಂಗವ ಪೂಜಿಸಿ ಫಲವೇನು*
*ಅವರ ಸುಖವೆನ್ನ ಸುಖ ಅವರ ದುಃಖವೆನ್ನ ದುಃಖ*
*ಕೂಡಲಸಂಗನ ಶರಣರ ಮನನೊಂದಡೆ*
*ಆನು ಬೆಂದೆನಯ್ಯ*

ಪೂಜೆ ಮತ್ತು ಭಕ್ತಿ ಎಂಬುದು ತೋರ್ಪಡಿಕೆ ಯಾಗಬಾರದು. ಶಿವಭಕ್ತರ ಕಷ್ಟ ಸುಖಕ್ಕಾಗದೆ ಸದಾ ಶಿವ ಪೂಜೆಯಲ್ಲಿ ತೊಡಗಿಕೊಂಡವ ಅನುಭಾವಿ ಯಾಗಲಾರ. ವ್ರತ ನೇಮವನ್ನು ಮಾಡುತ್ತಾ ಸದಾ ಕಾಲಹರಣ ಮಾಡಿ ಸಮಯಕ್ಕಾಗದವ ಬಂಧುವಲ್ಲ. ಕೇವಲ ಶಿವಾಧ್ಯಾನವೆಂದು ಹಸ್ತದ ಮೇಲೆ ಲಿಂಗವನ್ನು ಇಟ್ಟುಕೊಂಡು ನೀರೆರೆಯುತ್ತಾ ಬಾಯಾರಿದವನಿಗೆ ನೀರುಣಿಸಲೂ ಯೋಚಿಸಿದರೆ ತಾನು ಮಾಡುವ ಲಿಂಗಾರ್ಚನೆಗೆ ಯಾವ ಅರ್ಥವೂ ಬರುವುದಿಲ್ಲ ಕರ್ಕಶವಾದ ಮಾತುಗಳಿಂದ ಕ್ರೂರವಾದ ನಡೆ ನುಡಿಗಳಿಂದ ನೆರೆಹೊರೆಯವರನ್ನು ನಿಂದಿಸುತ್ತ ಇಷ್ಟಲಿಂಗ ಪೂಜೆ ಮಾಡಿದರೆ ಅದು ಎಂದಿಗೂ ಶ್ರೇಯಸ್ಕರವಲ್ಲವೆಂಬುದು ಈ ವಚನದ ತಾತ್ವಿಕತೆಯಲ್ಲಡಗಿದೆ

ನಡೆ ಮತ್ತು ನುಡಿಯ ಬಗೆಗೆ ಹಲವು ವಚನಕಾರರು ತಮ್ಮ ವಚನಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಏಕೆಂದರೆ ಪ್ರತಿಯೊಬ್ಬನಿಗೂ ತಾನು ಬದುಕಿನುದ್ದಕ್ಕೂ ನಡೆ ನುಡಿಯಲ್ಲಿ ಜಾಗರೂಕತೆ ವಹಿಸಬೇಕೆಂಬುದು ಕಟ್ಟೆಚ್ಚರದ ಸಂಗತಿ. ಏಕೆಂದರೆ ಅವನ ವ್ಯಕ್ತಿತ್ವ ಅಡಗಿರುವುದು ಇಲ್ಲಿಯೇ ಜಾಗರೂಕತೆ ಮತ್ತು ಎಚ್ಚರದ ಪ್ರಜ್ಞೆ ಭಕ್ತನಿಗೆ ಇರಬೇಕೆಂಬುದನ್ನು ಪಾಚಿ ಮತ್ತು ಮನಸ್ಸಿನ ಹೋಲಿಕೆಯ ಮೂಲಕ ತಿಳಿಸುತ್ತಾರೆ

*'ಹಾವಸೆಗಲ್ಲ ಮೆಟ್ಟಿಹರಿದು*
*ಗೊತ್ತ ಮುಟ್ಟಬಾರದಯ್ಯ*
*ನುಡಿದಂತೆ ನಡೆಯಲು ಬಾರದಯ್ಯ*
*ಕೂಡಲಸಂಗನ ಶರಣನ ಭಕ್ತಿ ಬಾಳ ಬಾಯಿಧಾರೆ'*

ಹಸಿರಿಗೂ ಪಾಚಿಗೂ ಸಾದೃಶ್ಯವಿದ್ದರೂ ಜಾರುವ ಗುಣ ಪಾಚಿಯದು. ಸಮೃದ್ಧ ಗುಣ ಹಸಿರಿನದು ಮನಸ್ಸಿನ ಮಾತು ಕೇಳುತ್ತ ಹರಿಯ ಬಿಟ್ಟರೆ ಪಾಚಿಯ ಮೇಲೆ ಕಾಲು ಜಾರುವುದು ದೇಹ ಎಷ್ಟೇ ಸದ್ರುಢವಾದರೂ ಕ್ಷಣಿಕದಲ್ಲಿ ಮನಸ್ಸು ದುರ್ಬಲವಾದರೆ ಜಾರಿದ ದೇಹಕ್ಕೆ ಪೆಟ್ಟು. ಅಂದರೆ ದೃಢವಾಗಿ ಗುರಿ ಮುಟ್ಟಲು ಅವನಿಗೆ ಸಾಧ್ಯವಿಲ್ಲ ಎಂದರ್ಥ. ನಾಲಿಗೆ ಹೊರಳಿದೆ ಅಂತೆಲ್ಲ ಮಾತನಾಡಿದರು ಗುರಿ ಮುಟ್ಟಲು ದೃಢವಾದ ಮನಸ್ಸಿರಬೇಕು ಮಾತು ಸಮ ಪ್ರಮಾಣ ಮೀರಿದರೆ ಖಡ್ಗದ ಬಾಯಿಗೆ ಸಿಲುಕಿದಂತೆ ಅದರಿಂದ ಹೊರಬರಲು ಆಗದೆ ಅದರಲ್ಲಿ ಸಿಲುಕಲು ಆಗದೆ ತೊಳಲಾಡುವ ನಮಗೆ ಅಪಾಯ ಹೆಚ್ಚೆಂದು ಈ ವಚನ ಧ್ವನಿಸುತ್ತದೆ. ಅಂದರೆ ದೃಢ ಭಕ್ತನಾದವನಿಗೆ ಅಡೆತಡೆಗಳೆ ಹೆಚ್ಚು ಎಲ್ಲವನ್ನು ಮೀರಿದವನೇ ಭಕ್ತ ಅವನೇ ಶರಣ ಎನ್ನಬಹುದು

ಈ ಮೇಲಿನ ಎಲ್ಲ ಅಂಶಗಳನ್ನು ಗಮನಿಸುತ್ತಾ ಬಂದರೆ 12ನೇ ಶತಮಾನ ವಚನಗಳ ರಚನೆಯಲ್ಲಿ ಮಾತ್ರ ತೊಡಗಿಲ್ಲ. ಅಂದರೆ ಬದುಕು ಮತ್ತು ಭಾವನೆಗಳು ಮನಸ್ಸಿನ ಹಿಡಿತಕ್ಕೆ ಸಂಬಂಧಿಸಿದವು. ಏಕೆಂದರೆ ವಚನಗಳಲ್ಲಿ ಬದುಕಿನ ಹಂದರ ಅಡಗಿದೆ ತಾತ್ವಿಕ ದರ್ಶನ ಸ್ಫುರಿಸುತ್ತದೆ ಇಲ್ಲಿ ಬದುಕು ಎಂದರೆ ಹುಟ್ಟಿನಿಂದ ಮಾತ್ರ ಬಂದದಲ್ಲ ಜೀವಿಸುವುದು ಎಂದರ್ಥ ಸಮಾಜದಲ್ಲಿ ವ್ಯಕ್ತಿ ಸಂಘ ಜೀವಿಯಾಗಿ ಬದುಕುತ್ತಾನೆಂದರೆ ಕೇವಲ ಸಂಸಾರವೇ ಅವನ ಸ್ವಂತಿಕೆಯಲ್ಲ ಸಮುದಾಯವು ತನ್ನದೆನ್ನುವ ಭಾವನೆ ಬರಬೇಕೆನ್ನುವುದು ವಚನಕಾರರ ಆಶಯ. ಇದನ್ನು ಆಮೂಲಾಗ್ರವಾಗಿ ದರ್ಶಿಸಿದವರು ಬಸವಣ್ಣನವರು. ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ, ಅಂಬಿಗರ ಚೌಡಯ್ಯ ಆಯ್ದಕ್ಕಿ ಮಾರಯ್ಯ ಮುಂತಾದ ಶಿವಶರಣರ ಜೊತೆ ಸಂವಾದವನ್ನು ಮತ್ತು

ಸಹಬಾಳ್ವೆಯನ್ನು ಮಾಡುವುದರ ಮೂಲಕ ಸಮಾಜಕ್ಕೆ ಆದರ್ಶಪ್ರಾಯರಾದರು. ತತ್ವಾದರ್ಷ ಹೇಳುವುದು ಮಾತ್ರವಲ್ಲದೆ ತಾತ್ವಿಕವಾಗಿ ಬದುಕಬಹುದು ಎಂಬುದನ್ನ ತಿಳಿಸಿದರು. ಆದ್ದರಿಂದ ಅವರ ಬದುಕಿನ ಅನನ್ಯತೆ 'ಅನುಭವ ಮಂಟಪ'ದಲ್ಲಿ ಮೂಡಲು ಕಾರಣರಾದರು ಒಟ್ಟಾರೆಯಾಗಿ ಕಾಲಚಕ್ರ ಎಷ್ಟೇ ಉರುಳಿದರು ವಚನಗಳು ತಮ್ಮ ತಾತ್ವಿಕತೆಯನ್ನು ಇನ್ನಷ್ಟು ಗಟ್ಟಿಗೊಳಿಸುತ್ತಾ ಅನನ್ಯತೆಯನ್ನು ಹಿಡಿದಿಟ್ಟಿವೆ ಎಂಬುದಕ್ಕೆ ಬಸವಣ್ಣನವರ ವಚನಗಳೇ ಸಾಕ್ಷಿ.

**ಪರಾಮರ್ಶನ/ಆಕರ ಗ್ರಂಥಗಳು**


- ಬಸವರಾಜು ಎಲ್. (ಸಂ.) (2018). *ಬಸವಣ್ಣನವರ ವಚನಗಳು.* ಸಪ್ನ ಬುಕ್ ಹೌಸ್
- ಮರುಳಸಿದ್ದಪ ಕೆ. ಮತ್ತು ಕಿ.ರಂ ನಾಗರಾಜ. (ಸಂ.) (2011) *ವಚನ ಕಮ್ಮಟ.* (ಮೂರನೇ ಮುದ್ರಣ) ಸ್ವಪ್ನ ಬುಕ್ ಹೌಸ್.
- ನಾಗಭೂಷಣಸ್ವಾಮಿ ಒ ಎಲ್. (2004). *ವಚನ ಸಾವಿರ.* ಪ್ರಸಾರಂಗ, ಹಂಪಿ ವಿಶ್ವವಿದ್ಯಾಲಯ.
- ರಾಧಾಕೃಷ್ಣ ಕೆ.ವಿ. (ಸಂ.) (2012). *ಆಯ್ದ ವಚನಗಳು.* ಅಂಬಾ ಪ್ರಕಾಶನ.
- ಹಿರೇಮಠ ಆರ್ ಸಿ. (1968). *ಭಕ್ತಿ ಭಂಡಾರಿ ಬಸವಣ್ಣನವರ ವಚನಗಳು.* ಕರ್ನಾಟಕ ವಿಶ್ವವಿದ್ಯಾಲಯ.
- ಚಿದಾನಂದ ಮೂರ್ತಿ ಎಂ. (2009). *ವಚನ ಸಾಹಿತ್ಯ.* ನವಕರ್ನಾಟಕ ಪ್ರಕಾಶನ.